

ಒಲಿಂಪಿಕ್ಸ್ ಮಾದರಿಯಲ್ಲಿ ಸೈಬೋರ್ಗ್‌ಗಾಗಿ ಸೈಬಥ್ಲಾನ್ ನಡೆಯುತ್ತದೆ. 2020ರ ಸೈಬಥ್ಲಾನ್ ಮೇ ತಿಂಗಳಲ್ಲಿ ಸ್ವಿಟ್ಜರ್ಲೆಂಡ್‌ನಲ್ಲಿ ನಡೆಯಬೇಕಿತ್ತು. ಕೊರೊನಾ ಬಿಕ್ಕಟ್ಟಿನ ಕಾರಣದಿಂದಾಗಿ ಆ ಪಂದ್ಯಾವಳಿ ಮುಂದಕ್ಕೆ ಹೋಗಿದೆ.



ಸದಾ ಮೊಬೈಲ್ ಫೋನನ್ನು ಕೈಯಲ್ಲಿ ಹಿಡಿದೋ, ಕಿವಿಗೆ ಕೀಲಿಸಿ ಕೊಂಡವರನ್ನೂ ಸೈಬೋರ್ಗ್ ಎನ್ನಬಹುದು. ಅದರಲ್ಲೂ ವೈದ್ಯಕೀಯ, ಜೀವವಿಜ್ಞಾನ ಮತ್ತು ಇಂಜಿನಿಯರಿಂಗ್‌ನ ಸಮರ್ಥ ಸಮನ್ವಯದಿಂದ ತಮ್ಮ ಭೌತಿಕ ಮಿತಿಗಳನ್ನು ಮೀರಿರುವ ಸಾವಿರಾರು ಜನ ಸೈಬೋರ್ಗ್‌ಗಳಾಗಿ ಬದಲಾಗಿದ್ದಾರೆ. ಹೊಸ ತಂತ್ರಜ್ಞಾನ ಮನುಷ್ಯನ ಕೈಯಷ್ಟೇ ಅಲ್ಲ, ದೇಹವನ್ನೂ ಸೇರಿಕೊಂಡು ಸಾಮರ್ಥ್ಯ ಮತ್ತು ವಿಶೇಷ ಶಕ್ತಿಯನ್ನು ನೀಡಿರುವುದಲ್ಲದೆ, ಆತನ ಕ್ಷಮತೆಯನ್ನು ಹೆಚ್ಚಿಸಿವೆ. ಸೈಬೋರ್ಗ್‌ಗಳ ಹಕ್ಕುಗಳು ಸಾಮಾನ್ಯ ಮಾನವ ಹಕ್ಕುಗಳಂತೆಯೇ ಇರಬೇಕು ಎಂದಿರುವ 'ಸೈಬೋರ್ಗ್ ಫೌಂಡೇಶನ್'ನ ಸ್ಥಾಪಕ ನೀಲ್ ಹರ್ಬಿಸನ್ ಕೆಳಗಿನ ಐದು ಹಕ್ಕುಗಳಿರಲೇಬೇಕು ಎಂದು ಪ್ರತಿ ಪಾದಿಸಿದ್ದಾನೆ.

- ಫ್ರೀಡಂ ಆಫ್ ಮಾರ್ಫಾಲಜಿ: ಯಾವುದೇ ಮನುಷ್ಯ ತನಗೆ ಬೇಕಾದಂತೆ ತಾತ್ಕಾಲಿಕ ಅಥವಾ ಶಾಶ್ವತವಾಗಿ ಬದಲಾಗುವ, ಅಂಗಾಂಗ ಹೊಂದುವ ಹಕ್ಕನ್ನು ಹೊಂದುವುದು.
- ರೈಟ್ ಟು ಬಾಡಿಲಿ ಸಾವರ್ನಿಟಿ: ದೇಹ ಮತ್ತು ಅಂಟಿಸಿಕೊಂಡ ಅಂಗಾಂಗ ಅಥವಾ ವ್ಯವಸ್ಥೆಯ ಮೇಲೆ ಸಾರ್ವಭೌಮತೆ ಹೊಂದುವುದು.
- ಫ್ರೀಡಂ ಫ್ರಂ ಡಿಸ್‌ಅಸೆಂಬ್ಲಿ: ತಾನು ದೇಹದಲ್ಲಿ ಮಾಡಿಕೊಂಡ ಬದಲಾವಣೆ ಅಥವಾ ಇಂಪ್ಲಾಂಟ್‌ನ್ನು ಶೋಧಿಸುವುದು, ಅದರ ಕೆಲಸವನ್ನು ನಿರ್ಬಂಧಿಸುವುದು, ಅದನ್ನು ತೆಗೆದು ಹಾಕಲು ಒತ್ತಾಯಿಸುವುದನ್ನು ತಡೆಯುವುದು.
- ರೈಟ್ ಟು ಆರ್ಗ್ಯಾನಿಕ್ ನ್ಯಾಚುರಲೈಜೇಶನ್: ದೇಹದಲ್ಲಿ ಇಂಪ್ಲಾಂಟ್ ಮಾಡಿಕೊಂಡ ಭಾಗಗಳ ಮೇಲಿನ ಹಕ್ಕು ವ್ಯಕ್ತಿಯದ್ದಾಗಿರುತ್ತದೆಯೇ ಹೊರತು ಭಾಗವನ್ನು ತಯಾರಿಸಿದವರದ್ದೋ ಅಥವಾ ಅದನ್ನು ಕೊಳ್ಳಲು ಹಣ ನೀಡಿರುವವರದ್ದೋ ಅಲ್ಲ.
- ಈಕ್ವಾಲಿಟಿ ಆಫ್ ಮ್ಯುಟ್ಯಾಂಟ್ಸ್: ಕಾನೂನಾತ್ಮಕವಾಗಿ ಇಂಪ್ಲಾಂಟ್ ಮಾಡಿಕೊಂಡು ಬದಲಾವಣೆ ಮಾಡಿಕೊಂಡಿರುವವರಿಗೂ ಇತರ ಸಾಮಾನ್ಯರಿಗೆ ಇರುವ ಎಲ್ಲ ಹಕ್ಕುಗಳೂ ದೊರೆಯುವುದು.

ಈ ಎಲ್ಲ ಹಕ್ಕುಗಳ ರಕ್ಷಣೆ ಮತ್ತು ಅನುಷ್ಠಾನಕ್ಕೆ ನಿರಂತರ ಹೋರಾಟ ನಡೆಸುತ್ತಿರುವ 'ಸೈಬೋರ್ಗ್ ಫೌಂಡೇಶನ್' 2016ರಲ್ಲಿ ಸೈಬೋರ್ಗ್ ಹಕ್ಕಿನ ವಿಧೇಯಕವೊಂದನ್ನು 'ಸೈಬೋರ್ಗ್ ಬಿಲ್ ಆಫ್ ರೈಟ್ಸ್ ವಿ 1.0' (Cyborg Bill of Rights V 1.0) ಅನ್ನು ಸೈಬೋರ್ಗ್‌ಗಳ ವಾರ್ಷಿಕ ಸಮ್ಮೇಳನ SXSWನಲ್ಲಿ ಪ್ರಸ್ತುತಪಡಿಸಲಾಗಿದೆ.

## ಸಿನಿಮಾ ಮತ್ತು ಸಾಹಿತ್ಯದಲ್ಲಿ ಸೈಬೋರ್ಗ್

'ದ ಮ್ಯಾನ್ ದಟ್ ವಾಸ್ ಯೂಸ್ಡ್ ಅಪ್' ಎನ್ನುವ ಸೈಬೋರ್ಗ್‌ಗಳ ಕುರಿತು ಬರೆಯಲಾದ ಮೊದಲ ಸಾಹಿತ್ಯ ಕೃತಿ 1843ರಷ್ಟು ಹಿಂದೆಯೇ ಪ್ರಕಟಗೊಂಡಿದ್ದಕ್ಕೆ ದಾಖಲೆ ಇದೆ. ಅಮೆರಿಕದ ಕವಿ, ಕತೆಗಾರ ಮತ್ತು ವಿಮರ್ಶಕ ಎಡ್ಗರ್ ಅಲ್ಲನ್ ಪೊ ತನ್ನ ಸಣ್ಣಕತೆ 'ದ ಮ್ಯಾನ್ ದಟ್ ವಾಸ್ ಯೂಸ್ಡ್ ಅಪ್'ನಲ್ಲಿ ಸೈನಿಕನೊಬ್ಬ ತಂತ್ರಜ್ಞಾನದ ಲಾಭ ಪಡೆದುಕೊಂಡು, ಬೇರಾರಿಗೂ ಇರದ ಚಾಕಚಕ್ಯತೆ ಮತ್ತು ಶಕ್ತಿಯಿಂದ ಹೇಗೆ ಎದುರಾಳಿ ಸೈನ್ಯವನ್ನು ಧೂಳೀಪಟ ಮಾಡುತ್ತಿದ್ದ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದ. ಸ್ಮಿತ್ ಹೆಸರಿನ ಕಥಾನಾಯಕ ಆಜಾನುಬಾಹುವಾಗಿದ್ದು,